# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| O. S. ನಂಬರ್ | : 113/2020 |
| ಡಿ.ಡಬ್ಲ್ಯೂ | : 3 |
| ಸಾಕ್ಷಿಯ ಹೆಸರು | : ಮಹಮ್ಮದಸಾಬ ಜಂಗ್ಲಿಸಾಬ ಉಗರಗೋಳ |
| ವಯಸ್ಸು | : 74 ವರ್ಷ |
| ಉದ್ಯೋಗ | : ದಸ್ತಾವೇಜು ಬರಹಗಾರರು |
| ವಾಸ ಸ್ಥಳ | : ಅಣ್ಣಿಗೇರಿ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ **02.09.2025**

ಮುಖ್ಯ ವಿಚಾರಣೆಃ ಶ್ರೀ ವಿ ಟಿ ಕೆ ವಕೀಲರಿಂದಃ

ನಾನು 1993-94 ರಿಂದ ದಸ್ತಾವೇಜು ಬರಹಗಾರರೆಂದುಅಣ್ಣಿಗೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ನಾನು ಸದರಿ ಕೆಲಸಕ್ಕೆ ಪರವಾನಗೆ ಪಡೆದುಕೊಂಡಿದ್ದು ಅದರ ಸಂಃ 105 ಆಗಿರುತ್ತದೆ. ನಿಡಿ-2 ನ್ನು ನಾನೇ ತಯಾರಿಸಿದ್ದು, ಅದು ಭಕ್ಷೀಸು ಪತ್ರವಾಗಿರುತ್ತದೆ. ಸಾಕ್ಷಿಯು ನಿಡಿ-2 ರ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು **ನಿಡಿ-2(ಎ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಯಲ್ಲರಡ್ಡಿ ಕರಮಳ್ಳಿಯವರು ರುದ್ರರಡ್ಡಿ ಕರಮಳ್ಳಿಯವರಿಗೆ ಸೊಟಕನಾಳ ಗ್ರಾಮದ ಸರ್ವೇ ನಂಃ 36/4 ಕ್ಕೆ ಸಂಬಂಧಿಸಿ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಬರೆಯುವ ವೇಳೆ ವೆಂಕರಡ್ಡಿ ಕರಮಳ್ಳಿಯವರು, ವಿ ಡಿ ಅಂದಾನಗೌಡ್ರ ರವರು ಹಾಜರಿದ್ದರು. ಸದರಿ ದಾಖಲೆಗೆ ಹೆಬ್ಬೆಟ್ಟಿನ ಗುರುತನ್ನು ಯಲ್ಲರಡ್ಡಿಯವರು ಮಾಡಿದ್ದು, ಸದರಿಯವರೆಲ್ಲಾ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ದಾಖಲೆ ನಿಜ ಇರುತ್ತದೆ.

2. ನಿಡಿ-3 ನ್ನು ನಾನೇ ತಯಾರಿಸಿದ್ದು, ಅದು ಭಕ್ಷೀಸು ಪತ್ರವಾಗಿರುತ್ತದೆ. ಸಾಕ್ಷಿಯು ನಿಡಿ-3 ರ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು **ನಿಡಿ-3(ಎ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಯಲ್ಲರಡ್ಡಿ ಕರಮಳ್ಳಿಯವರು ದಾನರಡ್ಡಿ ಕರಮಳ್ಳಿಯವರಿಗೆ ಸೊಟಕನಾಳ ಗ್ರಾಮದ ಸರ್ವೇ ನಂಃ 17/1 ಕ್ಕೆ ಸಂಬಂಧಿಸಿ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಬರೆಯುವ ವೇಳೆ ವೆಂಕರಡ್ಡಿ ಕರಮಳ್ಳಿಯವರು, ವಿ ಡಿ ಅಂದಾನಗೌಡ್ರ ರವರು ಹಾಜರಿದ್ದರು. ಸದರಿ ದಾಖಲೆಗೆ ಹೆಬ್ಬೆಟ್ಟಿನ ಗುರುತನ್ನು ಯಲ್ಲರಡ್ಡಿಯವರು ಮಾಡಿದ್ದು, ಸದರಿಯವರೆಲ್ಲಾ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ದಾಖಲೆ ನಿಜ ಇರುತ್ತದೆ.

3. ನಿಡಿ-4 ನ್ನು ನಾನೇ ತಯಾರಿಸಿದ್ದು, ಅದು ಹಕ್ಕು ಬಿಟ್ಟುಕೊಟ್ಟ ಪತ್ರವಾಗಿರುತ್ತದೆ. ಸಾಕ್ಷಿಯು ನಿಡಿ-4 ರ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು **ನಿಡಿ-4(ಸಿ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ರುದ್ರರಡ್ಡಿ ಯಲ್ಲರಡ್ಡಿ ಕರಮಳ್ಳಿಯವರು ವೆಂಕರಡ್ಡಿ ಹಾಗೂ ದಾನರಡ್ಡಿ ಕರಮಳ್ಳಿಯವರಿಗೆ ಸೊಟಕನಾಳ ಗ್ರಾಮದ ಸರ್ವೇ ನಂಃ 89/1+2/ಸಿ/1 ಎ ನೇದ್ದಕ್ಕೆ ಸಂಬಂಧಿಸಿ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಬರೆಯುವ ವೇಳೆ ವೆಂಕರಡ್ಡಿ ಹನಮರಡ್ಡಿ ತೆಂಬದಮನಿ ಹಾಗೂ ಸುಭಾಸ ಶೇಶಪ್ಪ ಕಡೇಮನಿ ರವರು ಹಾಜರಿದ್ದರು. ಸದರಿ ದಾಖಲೆಗೆ ವೆಂಕರಡ್ಡಿ, ದಾನರಡ್ಡಿ ಹಾಗೂ ರುದ್ರರಡ್ಡಿಯವರು ಸಹಿ ಮಾಡಿರುತ್ತಾರೆ. ಸದರಿಯವರೆಲ್ಲಾ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ದಾಖಲೆ ನಿಜ ಇರುತ್ತದೆ.

**ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದಃ**

ನನ್ನ ಪರವಾನಗೆಯನ್ನು ಪ್ರತಿವರ್ಷ ನವೀಕರಣ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಸದರಿ ನವೀಕರಣ ಒಮ್ಮೊಮ್ಮೆ ತಡವಾಗಬಹುದು ಎಂದರೆ ಸರಿ. ನವೀಕರಣವಾಗದ ಹೊರತು ನಾವು ದಾಖಲೆಗಳನ್ನು ಬರೆಯುವುದಿಲ್ಲ. ಸಾಮಾನ್ಯವಾಗಿ ದಾಖಲಾತಿಗಳನ್ನು ತಯಾರಿಸಿದಾಗ ಅವುಗಳನ್ನು ನಮ್ಮ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತೇವೆ. ನಿಡಿ-2 ರಿಂದ 4 ಗಳನ್ನು ರಿಜಿಸ್ಟರನಲ್ಲಿ ನಮೂದಿಸಿದ ಬಗ್ಗೆ ರಿಜಿಸ್ಟರ್ ನ್ನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಬರೆಯುವ ವೇಳೆ ನನ್ನ ಪರವಾನಗೆ ಚಾಲ್ತಿಯಲ್ಲಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ

ಎಲ್ಲಾ ದಾಖಲೆಗಳನ್ನು ಬರೆಯುವ ವೇಳೆ ನನ್ನ ಪರವಾನಗೆ ಚಾಲ್ತಿಯಲ್ಲಿರಲಿಲ್ಲ ಹಾಗೂ ಪ್ರತಿವಾದಿಯರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದಾಖಲೆಗಳಿಗೆ ನಾನು ದಸ್ತುರ ಎಂದು ಬರೆದು ಸಹಿ ಮಾಡಿ ಸಿಲ್ ಹಾಕುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಸಾಕ್ಷಿದಾರರು ಎಂದು ಬರೆದು ಅವರ ಸಹಿಗಳನ್ನು ಪಡೆಯಲಾಗುತ್ತದೆ ಎಂದರೆ ಸರಿ. ಸಾಕ್ಷಿದಾರರು ಎಂದು ಬರೆದು ಅದರ ಕೆಳಗೆ ಸಹಿ ಮಾಡಿದ ವ್ಯಕ್ತಿಗಳನ್ನು ದಾಖಲೆ ಬರೆದಿದ್ದಕ್ಕೆ ಸಾಕ್ಷಿದಾರರು ಎಂದು ಪರಿಗಣಿಸುತ್ತಾರೆ ಎಂದರೆ ಸರಿ. ಸದರಿ ನಿಡಿ-2 ರಿಂದ 4 ಗಳಿಗೆ ದಸ್ತೂರ ಎಂದು ಬರೆದು ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ದಸ್ತೂರ ಎಂದು ಬರೆದಿಲ್ಲ ಆದರೆ ನಾನೇ ಅದನ್ನು ಗಣಕೀಕೃತ ಮಾಡಿದವರು ಎಂದು ಇರುವ ಸ್ಥಳದಲ್ಲಿ ಸಹಿ ಮಾಡಿ ಸಿಲ್ ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ. ನನಗೆ ಗಣಕೀಕೃತ ಮಾಡಲು ಬರುತ್ತದೆ. ಸದರಿ ದಾಖಲೆಯನ್ನು ನಾನು ಕೇವಲ ಬೆರಳಚ್ಚು ಮಾಡಿದ್ದು ಆದರೆ ಅದನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಿಂದ 4 ಗಳಿಗೆ ಸಾಕ್ಷಿದಾರರು ನನ್ನ ಕಚೇರಿಯಲ್ಲಿ ಸಹಿ ಮಾಡುತ್ತಾರೆ. ಸದರಿ ದಾಖಲೆಗಳನ್ನು ನೋಂದಣಿ ಮಾಡುವ ಕಾಲಕ್ಕೆ ನಾನು ಹಾಜರಿರಲಿಲ್ಲ. ನಿಡಿ-2 ರಿಂದ 4 ಗಳಲ್ಲಿಯ 3 ನೇ ಪುಟದ ಹಿಂಬದಿಯಲ್ಲಿ ಗುರುತಿಸುವವರ ಜಾಗೆಯಲ್ಲಿ ಸಹಿ ಮಾಡಿದ ವ್ಯಕ್ತಿಗಳು ಸಾಕ್ಷಿದಾರರ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿ. ಭಕ್ಷೀಸು ಪತ್ರ ಹಾಗೂ ಹಕ್ಕು ಬಿಟ್ಟುಕೊಟ್ಟ ಪತ್ರದ ನಡುವಿನ ವ್ಯತ್ಯಾಸ ನನಗೆ ಗೊತ್ತಿರುತ್ತದೆ. ನಿಡಿ-2 ಮತ್ತು 3 ರಲ್ಲಿ ಹೆಬ್ಬೆಟ್ಟಿನ ಗುರುತು ಇರುವ ಸ್ಥಳದಲ್ಲಿ ಅದನ್ನು ಗುರುತಿಸಿದವರ ಸಹಿ ಇರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹೆಬ್ಬೆಟ್ಟಿನ ಗುರುತು ಮಾಡಿದವರ ಹೆಸರನ್ನು ಬರೆದ ನಂತರ ಅದಕ್ಕೆ ಸಹಿ ಮಾಡುವುದು ಕಡಿಮೆ. ನಿಡಿ-2 ರಲ್ಲಿ ಯಲ್ಲರಡ್ಡಿಯವರಿಗೆ ಆಸ್ತಿ ಯಾವ ರೀತಿ ಬಂತು ಎಂದು ನಾನು ವಿಚಾರಿಸಿರುತ್ತೇನೆ. ಸದರಿಯವರು ಅದು ನನ್ನ ಸ್ವಂತ ಆಸ್ತಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಿಡಿ-2 ರಿಂದ 4 ರಲ್ಲಿ ಕುಟುಂಬದ ಹೊಂದಾಣಿಕೆಗಾಗಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಡಿ-2 ರಿಂದ 4 ರಲ್ಲಿ ಸಾಕ್ಷಿದಾರರ ಸಹಿಗಳಿರುವ ಜಾಗೆಯಲ್ಲಿ ಅವರ ವಿವರಗಳನ್ನು ನಮೂದಿಸಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರೊಂದಿಗೆ ಮೀಲಾಪಿಯಾಗಿ ನಿಡಿ-2 ರಿಂದ 4 ಗಳನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಪ್ರತಿವಾದಿಯ ಪರ ಶ್ರೀ ಆರ್ ಎಂ ಆರ್ ವಕೀಲರಿಂದಃ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 6 ನೇ ಪ್ರತಿವಾದಿಯ ಪರ ಶ್ರೀ ಎಚ್ ಡಿ ಜಿ ವಕೀಲರಿಂದಃ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**